1956ರ ಕರ್ನಾಟಕ ರಾಜ್ಯ ಖಾದಿ ಮತ್ತು ಗ್ರಾಮೋದ್ಯೋಗ ಮಂಡಳಿ ಕಾಯ್ದೆಯ 26ನೇ ಪ್ರಕರಣದ ಮೇರೆಗೆ;

2. 1994-95 ಹಾಗೂ 1995-96ನೇ ಸಾಲುಗಳೆ ಕರ್ನಾಟಕ ರಾಜ್ಯ ಖಾದಿ ಮತ್ತು ಗ್ರಾಮೋದ್ಯೋಗ ಮಂಡಳಿಯ ವಾರ್ಷಿಕ ವರದಿಗಳನ್ನು ಹಾಗೂ 1993-94 ಹಾಗೂ 1994-95ನೇ ಸಾಲುಗಳ ಲೆಕ್ಕ ಪರಿಶೋಧನಾ ವರದಿಗಳನ್ನು ಮಂಡಿಸುತ್ತೇನೆ.

IX. ಶ್ರೀ ಸಿದ್ದರಾಮಯ್ಯ (ಉಪ ಮುಂಖ್ಯಮಂತ್ರಿ): ಶ್ರೀ ಕೆ.ಜಯಪ್ರಕಾಶ್ ಹೆಗ್ಡೆ (ಮೀನುಗಾರಿಕೆ ಹಾಗೂ ಬಂದರು ರಾಜ್ಯ ಮಂತ್ರಿ) ಅವರ ಪರವಾಗಿ:

1956 ಕಂಪೆನಿಗಳ ಕಾಯ್ದೆಯ 619ಎ ಪ್ರಕರಣದ ಮೇರೆಗೆ; ದಿನಾಂಕದ 31-3-1996ರಂದು ಅಂತ್ಯಗೊಳ್ಳುವ ಕರ್ನಾಟಕ ಮೀನುಗಾರಿಕಾ ಅಭಿವೃದ್ಧಿ ನಿಗಮ ನಿಯಮಿತ 26ನೆಯ ವಾರ್ಷಿಕ ವರದಿ ಮತ್ತು ಲೆಕ್ಕಪತ್ರಗಳನ್ನು (1-4-1995ರಿಂದ 31-3-1996ರವರೆಗೆ) (ವಿಳಂಬಕ್ಕೆ ಕಾರಣದ ಟಿಪ್ಪಣಿಯೊಂದಿಗೆ) ಮಂಡಿಸುತ್ತೇನೆ.

ಚೇರ್‌ಮನ್: ಎಲ್ಲಾ ಕಾಗದ ಪತ್ರಗಳನ್ನು ಸಭೆಯ ಮುಂದೆ ಮಂಡಿಸಲಾಯಿತು.

(3) ಚೇರ್‌ಮನ್‌ರವರ ಅಪ್ಪಣೆ ಮೇರೆಗೆ ಪ್ರಸ್ತಾಪಿಸಲಾದ ವಿಷಯಗಳು:

(ಅ) ಹೊಸದುರ್ಗ ತಾಲ್ಲೂಕು ಜಂತಿಕೊಳಲು ಗ್ರಾಮದ ಹತ್ತಿರ ವಿದ್ಯುತ್ ತಾಮ್ರದ ತಂತಿ ಕಳುವಾಗಿರುವುದು.

ಶ್ರೀ ಟಿ.ಹೆಚ್.ಬಸವರಾಜು (ಹೊಸದುರ್ಗ): ಮಾನ್ಯ ಚೇರ್‌ಮನ್‌ರವರೆ, ನನ್ನ ಕ್ಷೇತ್ರದಲ್ಲಿ ಬರುವ ಜಂತಿಕೊಳಲು ಗ್ರಾಮದ ಬಳಿ ದಿನಾಂಕ 20-5-1997ರಂದು ಸುಮಾರು 5 ಕಿ.ಮೀ.ನಷ್ಟು ಉದ್ದದ ವಿದ್ಯುತ್ ತಾಮ್ರದ ತಂತಿಯ ಕಳವು ಆಯಿತು. ಅದರ ಅಂದಾಜು ಬೆಲೆ ಸುಮಾರು 1 ಲಕ್ಷದ 50 ಸಾವಿರ ರೂಪಾಯಿಗಳು ಆಗುತ್ತದೆ. ಆ ಕಳ್ಳರು ಒಂದು ಲಾರಿಯಲ್ಲಿ ಬಂದು ಬಹಳ ವ್ಯವಸ್ಥಿತವಾಗಿ ಸುತ್ತಮುತ್ತಲಿನ ಹೊಲಗಳಲ್ಲಿ ಅಡ್ಡಾಡಿ ಅಷ್ಟೂ ವೈರ್‌ನ್ನು ಕಳವು ಮಾಡಿದ್ದಾರೆ. ಅವರು ಕಳವು ಮಾಡುವುದರಲ್ಲಿ ಬಹಳ ಪರಿಣಿತರು ಇರಬೇಕೆಂದು ತೋರುತ್ತದೆ.

12.20 ಪಿ.ಎಂ

ಈ ಪ್ರಕರಣ ಆಗುವುದಕ್ಕೆ 3 ತಿಂಗಳಿಗಿಂತ ಮುಂಚೆ ನನ್ನ ಕ್ಷೇತ್ರದ ವ್ಯಾಪ್ತಿಯಲ್ಲಿ ಬರತಕ್ಕಂಥ ಬಾಗೂರು ಗ್ರಾಮದ ಬಳಿ ಇದೇ ರೀತಿಯ ಕಳವು ಮಾಡಲು ಒಂದು

ಜಾಲವು ಬಂದಿತ್ತು. ಆದರೆ ಅವರುಗಳ ದುರಾದೃಷ್ಟವೋ ಏನೋ. ಕಳವು ಮಾಡಲು ಬಂದಾಗ ಒಬ್ಬನಿಗೆ ಶಾಖ್ ಹೊಡೆದು ಸ್ಥಳದಲ್ಲಿಯೇ ಸತ್ತುಹೋಗಿದ್ದಾನೆ. ಆ ಪ್ರಕರಣ ಇನ್ನೂ ಮುಗಿಯಲಿಲ್ಲ. ಅದಾದ ನಂತರ ಈ ದಿವಸ ಸುಮಾರು 5-6 ಹಳ್ಳಿಗಳಲ್ಲಿ ಬರತಕ್ಕಂಥ ಪ್ರದೇಶಗಳಲ್ಲಿ ರೈತರಿಗೆ ಸ್ವಲ್ಪ ವಿದ್ಯುತ್ತಿನ ಕಡಿತವೂ ಕೂಡ ಆಗಿದೆ. ಹಾಗಾಗಿ ಈ ಒಂದು ಪ್ರಕರಣವನ್ನು ಬೇಗ ಪತ್ತೆ ಹಚ್ಚಲಿಕ್ಕೆ ಸಂಬಂಧಪಟ್ಟ ಇಲಾಖೆಯವರು ಪರಿಣಿತರನ್ನು ಕಳುಹಿಸಿ ಮತ್ತು ರೈತರಿಗೆ ಆದಷ್ಟು ಬೇಗ ವಿದ್ಯುತ್ ಸರಬರಾಜು ಮಾಡಲು ಕೂಡ ಇಲಾಖೆಯವರು ಆದಷ್ಟು ಬೇಗ ಅದನ್ನು ದುರಸ್ತಿ ಮಾಡಬೇಕೆಂದು ತಮ್ಮ ಮೂಲಕ ಕೇಳಿಕೊಳ್ಳುತ್ತಿದ್ದೇನೆ.

ಶ್ರೀ ಶರಣ ಬಸಪ್ಪ ದರ್ಶನಾಪುರ್ (ಇಂಧನ ರಾಜ್ಯ ಸಚಿವರು): ಮಾನ್ಯ ಚೇರ್‌ಮನ್ ರವರೆ, ಮಾನ್ಯ ಸದಸ್ಯರು ಹೇಳಿದ ಹಾಗೆ, ಮದುರೆ ಫೀಡರ್ ಲೈನ್ ಕೆಟ್ಟುಹೋಗಿತ್ತು. ಆ ಅವಕಾಶವನ್ನು ನೋಡಿಕೊಂಡು ಅಲ್ಲಿ 21ನೇ ತಾರೀಖಿನ ದಿವಸ ಕೆಲವು ಕಳ್ಳರು ವೈರ್‌ನ್ನು ಕಳವು ಮಾಡಿದ್ದಾರೆ. ಆವತ್ತಿನ ದಿವಸ ಅಲ್ಲಿಯ ಹೊಸದುರ್ಗ ಪೊಲೀಸ್ ಸ್ಟೇಷನ್‌ನಲ್ಲಿ ಆ ಬಗ್ಗೇ ಕೇಸ್‌ನ್ನು ಕೂಡ ದಾಖಲು ಮಾಡಿದ್ದಾರೆ. ಆ 4-5 ಹಳ್ಳಿಗಳಿಗೆ ಬರತಕ್ಕಂಥ ವಿದ್ಯುತ್ ಸರಬರಾಜು ಏನು ಸ್ಥಗಿತ ಆಗಿದೆ ಅದನ್ನು ಸರಿಪಡಿಸಲು ನಮ್ಮ ಇಲಾಖೆಯಿಂದ ವ್ಯವಸ್ಥೆಯನ್ನು ಕೂಡ ಮಾಡಿದ್ದೇವೆ ಮತ್ತು ಅಲ್ಲಿಗೆ ಬೇಕಾದಂಥ ವೈರನ್ನೂ ಕೂಡ ನಾವು ಅಲ್ಲಿಗೆ ಕಳುಹಿಸಿದ್ದೇವೆ. ಒಟ್ಟಿನಲ್ಲಿ ಆ ಹಳ್ಳಿಗಳಿಗೆ ಇವತ್ತು ವಿದ್ಯುತ್ ಪೂರೈಕೆ ಆಗುತ್ತದೆಂದು ನಾನು ಮಾನ್ಯ ಸದಸ್ಯರಿಗೆ ಆಶ್ವಾಸನೆ ಕೊಡುತ್ತೇನೆ.

(ಆ) ತಿಪಟೂರಿನ ಕಾಲೇಜುಗಳಲ್ಲಿ ಶಿಕ್ಷಕರ ಹುದ್ದೆಗಳ ಹಾಗೂ ಅರೆಕಾಲಿಕಾ ಶಿಕ್ಷಕರಿಗೆ ಕಾನೂನು ಪ್ರಕಾರ ಭತ್ಯೆ ನೀಡುವುದು.

ಶ್ರೀ ಜೆ.ಸಿ.ಮಾಧುಸ್ವಾಮಿ (ಚಿಕ್ಕನಾಯಕನ ಹಳ್ಳಿ): ಮಾನ್ಯ ಚೇರ್‌ಮನ್‌ರವರೆ, ಸರ್ಕಾರದ ನೀತಿಯಿಂದಾಗಿ ಒಂದು ಕಡೆ ಅರೆಕಾಲಿಕ ಶಿಕ್ಷಕರನ್ನು ಖಾಯಂ ಮಾಡಲಿಲ್ಲ. ಇನ್ನೊಂದು ಕಡೆ ನಮ್ಮ ತಿಪಟೂರು ಕಾಲೇಜಿಗೆ ಸೀಮಿತವಾಗಿ ಮಾತನಾಡುವುದಾದರೆ 1991-92ನೇ ಸಾಲಿನಿಂದ ಇಲ್ಲಿಯವರೆಗೆ ಮ್ಯಾನೇಜ್‌ಮೆಂಟ್‌ನವರು ಅರೆಕಾಲಿಕ ಶಿಕ್ಷಕರಿಗೆ ಭತ್ಯೆಯ ರೂಪದಲ್ಲಿ ಕೊಟ್ಟಿದ್ದಾರೆ ಅದು ಸರ್ಕಾರದಿಂದ ರೀ-ಇಂಬರ್ಸ್ ಆಗದೆ ಸುಮಾರು 22 ಲಕ್ಷ ರೂಪಾಯಿ ಕಾಲೇಜಿನ ಸಂಸ್ಥೆಗೆ ಬರಬೇಕಾಗಿದೆ. ಇದನ್ನೇ ಆಧಾರವಾಗಿಟ್ಟುಕೊಂಡು ಅಲ್ಲಿ ರಿಟೈರ್ ಆಗಿ ಆಥವಾ ಯಾರಾದರೂ ಸತ್ತುಹೋಗಿ ಅಲ್ಲಿ ಏನು ವೇಕೆನ್ಸೀಸ್ ಕ್ರಿಯೇಟ್ ಆಗಿದೆ ಅದನ್ನೂ ಕೂಡ ಭರ್ತಿ ಮಾಡುವುದಕ್ಕೆ ಕೊಲಿಜ್‌ಎಟ್ ಡೆರೆಕ್ಟರವರು ಆ ತಿಪಟೂರು ಕಾಲೇಜಿಗೆ ಪರ್ಮಿಷನ್ ಕೊಡಲಿಲ್ಲ. ತಿಪಟೂರಿನ ವಿಜ್ಞಾನ ಕಾಲೇಜು ಮತ್ತು ಕಲಾ ಮತ್ತು ವಾಣಿಜ್ಯ ಕಾಲೇಜಿನಲ್ಲಿ ಸುಮಾರು 25 ಖಾಲಿ ಹುದ್ದೆಗಳು ಫಿಲ್‌ಅಪ್ ಮಾಡದೆ ಹಾಗೆಯೇ ಉಳಿದಿವೆ. ಅಲ್ಲಿನ ಮಕ್ಕಳ ಗತಿ ಏನು? ಅಲ್ಲಿಯ ಮ್ಯಾನೇಜ್‌ಮೆಂಟ್‌ನವರು ಸುಮಾರು 20 ಪರ್ಸೆಂಟ್ ಸಾಲ